

ಈಶ್ವರ ಬಡಿಗೇರ

# ಹ್ಯಾಪಿ ಯುಗಾದಿ! ಹ್ಯಾಪಿ ನ್ಯೂ ಇಯರ್!

ಪ್ರಕೃತಿಯಲ್ಲಷ್ಟೇ ಹೊಸತನ, ಮನುಷ್ಯನಿಗೆ ಹಳೆಯದೇ ಜೀವನ ಎನ್ನುವುದು ಅನೇಕರ ನಿರಾಶಾವಾದ. ಆದರೆ, ನಮ್ಮ ಬದುಕಿನಲ್ಲಿ ಹೊಸತೆನ್ನುವುದು ಯಾವುದೂ ಇಲ್ಲವೇ? ಇಲ್ಲಿನ ಸಂಭಾಷಣೆಯನ್ನು ಓದಿ, ನಿಮ್ಮ ಬದುಕಿನಲ್ಲಿನ ಹೊಸತೂ ನೆನಪಾದೀತು!

■ ಸಿ.ಆರ್. ಸತ್ಯ

‘ಹ್ಯಾಪಿ ಯುಗಾದಿ ರೀ, ಹ್ಯಾಪಿ ನ್ಯೂ ಇಯರೂ! ಏನು, ಹೇಗೆ ನಡೀತಿದೆ ಹೊಸ ವರುಷದ ಚಟುವಟಿಕೆಗಳು?’

‘ಏನು ಹೊಸ ವರ್ಷವೋ ಏನೋ... ಬಿಡಿ. ಕ್ಯಾಲೆಂಡರ್ ಪುಟಗಳನ್ನ ತಿರುಗಿಸುತ್ತಿದ್ರೆ, ಹೊಸ ವರುಷ ಬರ್ತಾನೇ ಇರುತ್ತೆ. ನಾನು ಮಾತ್ರ ಹಳೇ ಹೆಗ್ಗಣದ ಹಾಗೇ ಇದೀನಿ.’

‘ಯಾಕ್ರೀ, ಮೊನ್ನೆ ಮೊನ್ನೆಯೆಲ್ಲಾ ಹೊಸಾ ರೂಪಗಳನ್ನ ಪಡೆದ್ರಿ ಅಂತ ನೀವೇ ಹೇಳ್ತಿದ್ರಿ...’

‘ಯಾರು, ನಾನೇ?’

‘ಹೂಂ, ಮೊನ್ನೆ ಬೆಳಿಗ್ಗೆ ತರಕಾರಿ ತರೋಕ್ಕೆ ಹೋಗ್ತಾ ಇದ್ದಾಗ ರೋಡ್‌ನಲ್ಲಿ ಬಿದ್ದು, ಹಲ್ಲುಗಳು ಒಡೆದು, ಎರಡು ಹೊಸಾ ಕ್ಯಾಪ್‌ಗಳನ್ನ ಹಾಕಿಸ್ಕೊಂಡೆ ಅಂದ್ರಿ. ಅವು ಹೊಸದಲ್ಲವೆ?’

‘ಓ, ಅವೇ...?’

‘ಆಮೇಲೆ, ವರ್ಷ ಶುರು ಆಗ್ತಿದ್ದಾಗಲೇ ಎರಡು ಕಣ್ಣುಗಳಿಗೂ ಕ್ಯಾಟರಾಕ್ಟ್ ಆಪರೇಷನ್ ಆಯ್ತು. ಎಲ್ಲಾ ಹೊಸ ಹೊಸದಾಗಿ ಕಾಣ್ತೆದೆ ಅಂತ ಹೇಳ್ತಿದ್ರಿ...’

‘ಅಯ್ಯೋ, ಅದು ಬಿಡಿ...’

‘ಡಾಕ್ಟ್ರು ಹೊಸ ಕನ್ನಡಕಾನೂ ಕೊಟ್ರು ಅಂದ್ರಿ.’

‘ಹೂಂ, ಹೂಂ...’

‘ಆಮೇಲೆ... ಇನ್ನೇನೋ ಹೇಳ್ತಿದ್ರಿ... ಜ್ಞಾಪಕ ಬಂತು, ಯಾಕೋ ಈ ವರ್ಷ ಇದ್ದಕ್ಕೆ ಇದ್ದಹಾಗೆ ಹೊಸದಾಗಿ ನನಗೆ ಗ್ರೇ ಹೇರ್ ಬಂದುಬಿಟ್ಟಿದೆ ರೀ, ನಿಮಗೆ ಒಳ್ಳೆ ಹೇರ್ ಡೈ ಬಗ್ಗೆ ಗೊತ್ತಿದ್ರೆ ಹೇಳಿ ಅಂತ ನನ್ನನ್ನ ಕೇಳಿದ್ರಿ.’

‘ಹೌದು, ಹೌದು. ನೀವು ಹೇಳಿದ್ದ ಹೇರ್ ಡೈ ಹಾಕಿಕೊಂಡ ಮೇಲೆ ಇದ್ದ ಬದ್ದ ಸ್ವಲ್ಪ ಕೂದಲೂ ನರೆತುಹೋದ್ವು!’

‘ಹೌದೆ? ಅದೂ ಒಂದು ಹೊಸ ಅನುಭವ ಆಯ್ತು ಬಿಡಿ ನಿಮಗೆ. ಹೋದ ವಾರ ನಾವು ದೇವಸ್ಥಾನಕ್ಕೆ ಹೋದಾಗ, ನಿಮ್ಮ ಚಪ್ಪಲಿಗಳನ್ನ ಯಾರೋ ಹೊಡೆದುಕೊಂಡು ಹೋದ್ರು ಅಂತ ನೀವು ಇನ್ಯಾರದೋ ಚಪ್ಪಲಿಗಳನ್ನ ಹಾಕ್ಕೊಂಡು ಬಂದ್ರಿ... ಅದು ಹೊಸ ಅನುಭವ ಅಲ್ವೆ?’

‘ಅಯ್ಯೋ, ಹತ್ತು ನಿಮಿಷ ನಡೆದ ಮೇಲೆ ಅವು